**AKSHARASURYA**
Peer-Reviewed, Multi Lingual E-Journal
Volume – 01, Issue – 03, December 2022.

# ಆಧುನಿಕ ಯುಗದ ಮಹಿಳಾ ಕಾವ್ಯದಲ್ಲಿ ಹೆಣ್ಣಿನ ಅಭಿವ್ಯಕ್ತಿಯ ಮೊದಲ ಕೂಗು

**ಡಾ. ವೇದಾವತಿ ಯಸ್**
ಸಹಾಯಕ ಪ್ರಾಧ್ಯಾಪಕರು
ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಸರಕಾರಿ ಕಾಲೇಜು ಕಾಸರಗೋಡು.
vedavathis704@gmail.com

ಇಪ್ಪತ್ತನೇ ಶತಮಾನದ ಆರಂಭ ಎಂದರೆ ಆಧುನಿಕ ಯುಗದ ಪ್ರಾರಂಭ ಘಟ್ಟವೆಂದೇ ಹೇಳಬಹುದು. ಈ ಯುಗ ಮಹಿಳಾ ಸಾಹಿತ್ಯದಲ್ಲಿ ಹೊಸ ಕ್ರಾಂತಿಯುಂಟಾದ ಕಾಲವಾಗಿದೆ. ರಾಷ್ಟ್ರೀಯ ಚಳುವಳಿ, ಪಾಶ್ಚಾತ್ಯ ಸಂಪರ್ಕ, ಹೊಸ ಶಿಕ್ಷಣ ಮತ್ತು ಸಾಮಾಜಿಕ ಚಿಂತನೆಗಳ ಪರಿಣಾಮದಿಂದ ಸಮಾಜದಲ್ಲಿ ಸುಧಾರಣಾ ಮನೋಭಾವ ಕಾಣಿಸಿಕೊಂಡಿತು. ಪರಂಪರಾಗತ ಪುರುಷ ನಿರ್ಮಿತ ಸಮಾಜದಲ್ಲಿ ಮಹಿಳೆ ಬೆಳೆದು ಬಂದರೂ ಆತ್ಮವಿಶ್ವಾಸದಿಂದ ತಮ್ಮ ಅನುಭವಗಳನ್ನು ಅಭಿವ್ಯಕ್ತಿಸ ತೊಡಗಿದ ಕವಯತ್ರಿಯರು ಉದಯವಾದ ಕಾಲ. ಶೈಕ್ಷಣಿಕವಾದ ಪ್ರಗತಿಯೇ ಈ ಬದಲಾವಣೆಗೆ ಪ್ರಧಾನವಾದ ಕಾರಣ. ಈ ಅವಧಿಯಲ್ಲಿ ಕಥನ ಸಾಹಿತ್ಯ ಮಹಿಳೆಯರನ್ನು ಆಕರ್ಷಿಸಿದಷ್ಟು ಕಾವ್ಯ ಆಕರ್ಷಿಸಿರಲಿಲ್ಲ. ತಮ್ಮ ಭಾವನೆಗಳನ್ನು ನೇರವಾಗಿ ಹೇಳುವುದಕ್ಕಿಂತಲೂ ಪಾತ್ರಗಳ ಮೂಲಕ, ಸನ್ನಿವೇಶಗಳ ಮೂಲಕ ದೀರ್ಘವಾಗಿ ನಿರೂಪಿಸುವುದನ್ನು ಬಯಸಿದ್ದರಿಂದಲೇ ಮಹಿಳೆಯರು ಕಾವ್ಯಕ್ಕಿಂತ ಕಥನಸಾಹಿತ್ಯಕ್ಕೆ ಆಕರ್ಷಿತರಾಗಿದ್ದರು. ಇಪ್ಪತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಕವಯತ್ರಿಯರಿಗೆ ದೊರೆತ ಮುಕ್ತ ಅವಕಾಶ ಕಾವ್ಯದಲ್ಲಿ ತನ್ನತನವನ್ನು ಅನಾವರಣಗೊಳಿಸಲು ಅವಕಾಶ ಕಲ್ಪಿಸಿತು. ಆದರೆ ಕಾವ್ಯ ಬರೆದವರ ಸಂಖ್ಯೆ ಕಡಿಮೆ. ವಾಚ್ಯಾರ್ಥ ಪ್ರಧಾನವಾಗಿರುವ ಕೆಲವೇ ಕಾವ್ಯಗಳಲ್ಲಿ ದಟ್ಟ ನೀತಿ, ಉಪದೇಶಗಳು ಸಾಮಾಜಿಕ ಪರಿವರ್ತನೆಯ ಭಾಗವಾಗಿ ಕಾಣಿಸಿಕೊಂಡಿರುವುದನ್ನು ನಿರ್ದಿಷ್ಟ ಕವಯತ್ರಿಯರ ಪ್ರಾತಿನಿಧಿಕ ಕವಿತೆಗಳಲ್ಲಿ ಗುರುತಿಸಬಹುದು.

ಕನ್ನಡ ನಾಡಿನಲ್ಲಿ ಸ್ವಾತಂತ್ರ್ಯ ಚಳುವಳಿ, ಅದರ ಭಾಗವಾಗಿದ್ದ ಸಮಾಜ ಸುಧಾರಣಾ ಚಳುವಳಿಗಳು ತುಂಬ ಸಕ್ರಿಯವಾಗಿದ್ದ ಕಾಲ ಇದಾಗಿತ್ತು. ಸ್ತ್ರೀಶಿಕ್ಷಣಕ್ಕೆ ಪ್ರಾಶಸ್ತ್ಯವೂ ಒದಗಿ ಬಂದ ಸಂದರ್ಭವೂ ಆಗಿರುವುದನ್ನು ಗುರುತಿಸಬಹುದಾಗಿದೆ. ಅಲ್ಪ ಸ್ವಲ್ಪ ಶಿಕ್ಷಣ ಪಡೆಯುತ್ತಿದ್ದ ಸ್ತ್ರೀಯರು ಮನೆಯಲ್ಲಿನ ಸಾಹಿತ್ಯಕ ಪ್ರಭಾವಗಳಿಂದ ಸ್ಫೂರ್ತಿಗೊಂಡೋ ಇಲ್ಲವೇ ಶೀಘ್ರ ವಿವಾಹ, ಶೀಘ್ರ ವೈಧವ್ಯಗಳಿಂದ ಅನುಭವಿಸುತ್ತಿದ್ದ ಖಾಲಿತನವನ್ನು ತುಂಬಿಕೊಳ್ಳಲೆಂದು ಕಾವ್ಯರಚನೆಯಲ್ಲಿ ತೊಡಗಿಕೊಂಡುದನ್ನು ಗುರುತಿಸಲು ಸಾಧ್ಯವಾಗುವುದು. ಇವರಿಗೆ ತಾವೇನೋ ಸಾಹಿತ್ಯದ ದೊಡ್ಡ ಕೆಲಸ ಮಾಡುತ್ತಿದ್ದೇವೆ ಎಂಬ ಭಾವನೆ ಇದ್ದಂತಿರಲಿಲ್ಲ. ಮನೆಯ ಸೀಮಿತ ಚೌಕಟ್ಟಿನಲ್ಲಿ, ಕೌಟುಂಬಿಕ ಸಮಾರಂಭಗಳಿಗೆ ಸೀಮಿತರಾಗಿ, ಸಮಯದೊಡನೆ ಎಲ್ಲಾ ಹೊಂದಾಣಿಕೆಗಳನ್ನು ಮಾಡಿಕೊಳ್ಳುತ್ತಾ, ಪ್ರಧಾನ ಸಂಸ್ಕೃತಿಗೆ ಅಧೀನವಾಗಿಯೇ ಸಾಗಿದ ಕಾವ್ಯ ಪರಂಪರೆ ಇದು. ಈ ಕಾಲಘಟ್ಟದ ಬಹಳ ಪ್ರಮುಖವಾದ ವಿಚಾರಧಾರೆಯೆಂದರೆ ಇಲ್ಲಿನ ಕವಯತ್ರಿಯರಲ್ಲಿದ್ದ ಪ್ರತಿಭೆ ಮತ್ತು ಬರೆಯಬೇಕೆಂಬ ಶ್ರದ್ಧೆ, ಸಂಕಲ್ಪ. ತಮ್ಮ ಸಮಕಾಲೀನ ಲೇಖಕರಿಗಿದ್ದ ಸ್ವಾತಂತ್ರ್ಯ ಮತ್ತು ಸವಲತ್ತುಗಳನ್ನು ಪಡೆಯದೆಯೇ ಕಾವ್ಯವೆಂಬ ಕುಡಿಗೆ ನೀರೆರೆಯುತ್ತಾ ಬಂದು ಪೋಷಿಸಿದವರು. ತಮ್ಮದೇ ಆದ ಕಾವ್ಯ ಕಾಣಿಕೆಯನ್ನು ಸಾಹಿತ್ಯ ಕ್ಷೇತ್ರಕ್ಕೆ ಕೊಟ್ಟು ಕಣ್ಮರೆಯಾದವರು. ಇಂತಹ ಎಲೆಮರೆಯ ಕಾಯಿಗಳನ್ನು ಬೇಂದ್ರೆಯಂತಹ ಪ್ರಸಿದ್ಧ ಸಾಹಿತಿಗಳು ಗುರುತಿಸಿಕೊಂಡು ಮೆಚ್ಚುಗೆ ವ್ಯಕ್ತಪಡಿಸಿರುವುದು ಕವಯತ್ರಿಯರ ವಿಶೇಷವಾದ ಪ್ರತಿಭೆಗೆ ಸಂದ ಮನ್ನಣೆಯೆಂದೇ ಹೇಳಬಹುದು.

ಈ ಅವಧಿಯ ಕವಯತ್ರಿಯರು ಸೀಮಿತ ಚೌಕಟ್ಟಿನಲ್ಲಿ ಕವಿತೆಗಳನ್ನು ರಚಿಸುತ್ತಿದ್ದರೂ ಕಾವ್ಯಗಳಲ್ಲಿ ತಮ್ಮದೇ ಆದ ಸ್ವಂತಿಕೆಯನ್ನು ಮೆರೆದಿರುವುದು ಅವರ ಆಂತರ್ಯದ ಮುಕ್ತತೆಯನ್ನು ತೋರ್ಪಡಿಸುತ್ತದೆ. ಈ ಅವಧಿಯಲ್ಲಿ ಹೆಚ್ಚೇನೂ

ಕವಯತ್ರಿಯರಿಲ್ಲದಿದ್ದರೂ ಬರೆದವರಲ್ಲಿ ಹೆಚ್ಚಿನವರು ಆಶುಕವಯತ್ರಿಯರೇ ಆಗಿದ್ದರು. ಉಕ್ಕಂದವಾದ ಭಾವನೆಗಳನ್ನು ತಡೆಹಿಡಿಯಲಾಗದೇ ಆ ಕ್ಷಣದಲ್ಲಿ ಅದನ್ನು ಶಬ್ದರೂಪಕ್ಕಿಳಿಸಿದವರು ಈ ಕವಯತ್ರಿಯರು. ತಮ್ಮದೇ ಆದ ಕೋಣೆ, ಸಮಯಕ್ಕಾಗಿ ಕಾಯದೇ ತಮ್ಮ ಭಾವನೆಗಳಿಗೆ ಮೂರ್ತರೂಪವನ್ನು ಕೊಟ್ಟವರು ಇಲ್ಲಿನ ಕವಯತ್ರಿಯರು ಎನ್ನುವುದು ಗಮನಾರ್ಹ. ಹೆಣ್ಣಿನ ವಿವಿಧ ಅವಸ್ಥೆಗಳನ್ನು, ಸಂಕಟಗಳನ್ನು ಅಭಿವ್ಯಕ್ತಿಗೊಳಿಸುತ್ತಲೇ ಅವಳಿಗೊಂದು ಅಸ್ತಿತ್ವವಿದೆ ಎನ್ನುವುದನ್ನು ಕಾವ್ಯದ ಮುಖ್ಯ ಆಶಯವನ್ನಾಗಿಸಿರುವುದನ್ನು ಗುರುತಿಸಲಾಗಿದೆ. ಹೆಣ್ಣು ತನ್ನ ಬದುಕಿನಲ್ಲಿ ಎದುರಿಸಬಹುದಾದ ಸಮಸ್ಯೆಗಳನ್ನು ತಮ್ಮ ಬರವಣಿಗೆಯ ವಸ್ತುವಾಗಿ ಸ್ವೀಕರಿಸಿದ್ದರಿಂದ ಸ್ತ್ರೀ ಕೇಂದ್ರಿತ ವಿಚಾರಗಳಿಗೆ ಸಂಬಂಧಿಸಿದಂತೆ ಹೊಸ ಅಲೆಯೊಂದು ಹುಟ್ಟಿಕೊಂಡಿತು. 1885 ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವು ಧಾರವಾಡದಲ್ಲಿ ಸಾಹಿತ್ಯಕ ಚಟುವಟಿಕೆಗಳನ್ನು ಪ್ರಾರಂಭಿಸಿತು. 'ವಾಗ್ಭೂಷಣ' ಪತ್ರಿಕೆಯು ಸಾಹಿತ್ಯದ ರುಚಿಯನ್ನು ಜನತೆಗೆ ತಿಳಿಸಿ, ಓದುವ ಅಭಿರುಚಿಯನ್ನುಂಟು ಮಾಡಿತು. 1915 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅಸ್ತಿತ್ವದಲ್ಲಿ ಬಂತು. 1916 ರಲ್ಲಿ ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆಗೊಂಡು ಕನ್ನಡ ಸಾಹಿತ್ಯದ ವಿಕಾಸಕ್ಕೆ ಪ್ರೋತ್ಸಾಹವನ್ನಿತ್ತಿತು. ಇತರ ಭಾಷೆಯ ಸಾಹಿತ್ಯದಿಂದ ಅನುವಾದಿತ ಕೃತಿಗಳು ಕನ್ನಡಕ್ಕೆ ಬಂದು ಕನ್ನಡಿಗರನ್ನು ಜಾಗೃತಗೊಳಿಸಿದವು. ಇದೇ ಸಂದರ್ಭದಲ್ಲಿ ಗಾಂಧೀಜಿಯವರೂ ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರಗಳಿಗೆ ಕಾಲಿಟ್ಟರು. ನಾಡಿನ ಜನತೆಯ ಆಶೆ, ಆಕಾಂಕ್ಷೆ, ಅತೃಪ್ತಿಗಳು ಸಾಹಿತ್ಯಕ ಅಭಿವ್ಯಕ್ತಿಯನ್ನು ಪಡೆದವು.. ಇಪ್ಪತ್ತನೆಯ ಶತಮಾನದ ಕವಯತ್ರಿಯರೆಲ್ಲಾ ಹೆಚ್ಚಾಗಿ ಈ ವಾತಾವರಣದಿಂದ ಪ್ರಭಾವಿತರಾಗಿರುವುದನ್ನು ಗುರುತಿಸಬಹುದು.

ಈ ಯುಗದಲ್ಲಿ ಕಾಣಿಸಿಕೊಂಡ ಕವಯತ್ರಿಯರೆಲ್ಲ ಹೆಚ್ಚಾಗಿ ಮಧ್ಯಮವರ್ಗದವರು ಆಗಿದ್ದಾರೆ. ನಾಡಿನ ಆಗುಹೋಗುಗಳ ಬಗ್ಗೆ, ಸ್ತ್ರೀಯ ಸಾಮಾಜಿಕ ಕೌಟುಂಬಿಕ ಸ್ಥಾನ ಮಾನಗಳ ಬಗ್ಗೆ ಮಧ್ಯಮವರ್ಗದ ಪ್ರತಿಕ್ರಿಯೆ ತೀವ್ರವಾಗಿತ್ತೆನ್ನುವುದಕ್ಕೆ ಇವರು ಸಾಕ್ಷಿಯಾಗಿರುವುದನ್ನು ಕಾಣಬಹುದು. ಈ ಸಂದರ್ಭದಲ್ಲಿ ಕಾಣಿಸಿಕೊಂಡ ಪ್ರತಿಯೊಬ್ಬರ ಕಾವ್ಯಗಳೂ ಅವರವರ ವ್ಯಕ್ತಿತ್ವದ ಪ್ರತಿಬಿಂಬವಾಗಿದೆ. ಇವರಲ್ಲಿ ಕೆಲವರು ಶಾಲೆಯಲ್ಲಿ ಅಲ್ಪಸ್ವಲ್ಪ ಶಿಕ್ಷಣವನ್ನು ಪಡೆದವರು. ತಮ್ಮ ವಿಚಾರಗಳನ್ನು ವ್ಯಕ್ತಗೊಳಿಸಬಲ್ಲವರು. ಪರಂಪರಾಗತ ಪುರುಷ ನಿರ್ಮಿತ ಸಮಾಜದಲ್ಲಿ ಬೆಳೆದು ಬಂದು ಆತ್ಮವಿಶ್ವಾಸದಿಂದ ಹಾಡುವ ಸಾಹಸವನ್ನು ಮಾಡಿದ ಕವಯತ್ರಿಯರಿವರು. ಆಧುನಿಕ ಯುಗದ ಆರಂಭಿಕ ಕಾಲಘಟ್ಟದ ಕವಯತ್ರಿಯರ ಕವಿತೆಗಳು ಮುಂದಿನ ಎಪ್ಪತ್ತರ ದಶಕದ ಕವಯತ್ರಿಯರ ಆಲೋಚನೆಗಳಿಗೆ ಮುನ್ನುಡಿಯನ್ನು ಬರೆದಿರುವುದಲ್ಲದೆ ಹೊಸ ಅರಿವನ್ನು ಮೂಡಿಸಿರುವುದನ್ನು ಗುರುತಿಸಲು ಸಾಧ್ಯವಾಗುವುದು. ಕಾವ್ಯಪ್ರಕಾರದಲ್ಲಿ ಮಹಿಳಾಭಿವ್ಯಕ್ತಿಯ ಮೊದಲ ಕೂಗು ಇಲ್ಲಿಂದಲೇ ಕೇಳಿಬಂದಿರುವುದನ್ನು ಗುರುತಿಸಬಹುದು

ಆಧುನಿಕ ಯುಗದ ಆರಂಭಿಕ ಕಾಲಘಟ್ಟದ ಪ್ರಮುಖ ಕವಯತ್ರಿಯರೆಂದರೆ ಬೆಳಗೆರೆ ಜಾನಕಮ್ಮ, ಜಯದೇವಿ ತಾಯಿ ಲಿಗಾಡೆ ಮತ್ತು ತಿರುಮಲೆ ರಾಜಮ್ಮ,. ಇವರಲ್ಲಿ ಬೆಳಗೆರೆ ಜಾನಕಮ್ಮ ಮುಖ್ಯವಾಗಿ ಕಾವ್ಯವನ್ನು ಅಭಿವ್ಯಕ್ತಿಯ ಮುಖ್ಯ ಮಾಧ್ಯಮವನ್ನಾಗಿ ಸ್ವೀಕರಿಸಿಕೊಂಡವರು. ಆದ್ದರಿಂದಲೇ ಆಧುನಿಕ ಯುಗದ ಪ್ರಾತಿನಿಧಿಕ ಕವಯತ್ರಿಯಾಗಿ ಬೆಳಗೆರೆ ಜಾನಕಮ್ಮನನ್ನು ಗುರುತಿಸಲು ಸಾಧ್ಯವಾಗುವುದು.

**ಬೆಳಗೆರೆ ಜಾನಕಮ್ಮ**

ಅಗಾಧ ಪ್ರಮಾಣದ ಕವಿತ್ವ ಶಕ್ತಿಯುಳ್ಳ ಪ್ರತಿಭಾವಂತ ಕವಯತ್ರಿ ಬೆಳಗೆರೆ ಜಾನಕಮ್ಮ. ಹೆಣ್ಣಿನ ಬಾಳಿನ ಪ್ರತಿಯೊಂದು ಹಂತದಲ್ಲೂ ಎದುರಿಸಬೇಕಾದ ಕಷ್ಟಗಳನ್ನು, ವಾಸ್ತವಿಕ ಪ್ರಪಂಚಕ್ಕೆ ತೆರೆದಿಡುತ್ತಾ ಅದಕ್ಕೆ ತನ್ನದೇ ಆದ ನಿಲುವನ್ನು ವ್ಯಕ್ತಪಡಿಸುವ ಪ್ರಯತ್ನ ಕವಯತ್ರಿಯದು. ವಾಸ್ತವಿಕ ಪ್ರಪಂಚದ ಮೌಲ್ಯಗಳನ್ನು ಅರಿತು ನವೀನದೃಷ್ಟಿಕೋನವನ್ನು ಬೀರಿದ ಇವರು ಈ ಅವಧಿಯ ಆಧುನಿಕ ಕವಯತ್ರಿಯರ ಪಂಕ್ತಿಯಲ್ಲಿ ಪ್ರಗತಿಪರ ಚಿಂತನೆಯುಳ್ಳವರು ಎಂಬುದು ಸ್ಪಷ್ಟ. 'ಗಿಡವೆಂದು ಬಗೆದೆಯೋ

ಹೆಣ್ಣುಜನ್ಮದ ಒಡಲ ಫಲಗಳನ್ನು ಸೃಜಿಸುವುದಕೆ' ಹೀಗೆ ಬ್ರಹ್ಮನನ್ನೇ ತರಾಟೆಗೆ ತೆಗೆದುಕೊಂಡ ಕವಯತ್ರಿ ಬೆಳಗೆರೆ ಜಾನಕಮ್ಮ ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ, ಶಿಕ್ಷಣದಿಂದ ವಂಚಿತರಾಗಿ, ಚಿಕ್ಕ ವಯಸ್ಸಿನಲ್ಲಿಯೇ ಸಂಸಾರ ಬಂಧನಕ್ಕೊಳಗಾದವರು. ಆದರೂ ಬದುಕಿನುದ್ದಕ್ಕೂ ನಿರ್ಭೀಡೆಯಿಂದಲೇ ಹಾಡುತ್ತಾ ತಮ್ಮ 36ನೆಯ ವಯಸ್ಸಿನಲ್ಲಿ ವಿಧಿವಶರಾದವರು. ಇವರ ಕವನಗಳು ಅವರ ಕಾಲಾನಂತರವೂ ಜನಮನಸ್ಸಿನಲ್ಲಿ ಅಚ್ಚೊತ್ತಿ ನಿಂತಿರುವುದೆಂದರೆ ಅದು ಅವರ ಕವಿತಾಶಕ್ತಿಯನ್ನು ತಿಳಿಯಪಡಿಸುತ್ತದೆ. ಸೀಮಿತವಾದ ಚೌಕಟ್ಟಿನಲ್ಲಿ ಹಾಡನ್ನೇ ಉಸಿರಾಗಿಸಿದ ಬೆಳಗೆರೆ ಜಾನಕಮ್ಮನನ್ನು ನವೋದಯದ ಮೊತ್ತಮೊದಲ ಕವಯತ್ರಿಯಾಗಿ ಗುರುತಿಸಲಾಗಿದೆ. 'ನವೋದಯದ ಈ ಮೊಟ್ಟಮೊದಲ ಕವಯತ್ರಿ ತನ್ನ ಕಾಲದ ಎಲ್ಲ ತಿರುವುಗಳಿಗೂ ಸ್ಪಂದಿಸಿದವರು. ಆ ಕಾಲದ ಅನಕ್ಷರತೆಯ ಪಿಡುಗಿಗೆ, ಪ್ರೋತ್ಸಾಹದ ಕೊರತೆಗೆ, ಸಮಾಜದ ಕೀಳು ನೋಟಕ್ಕೆ, ಸಾಮಾನ್ಯರ ಗೇಲಿ ಮಾತುಗಳಿಗೆ ಗುರಿಯಾದವರು ಈಕೆ. ಈ ಕಾರಣದಿಂದಲೇ ಜಾನಕಮ್ಮ ಓರ್ವ ಕವಯತ್ರಿಯಾಗಿ ಉಳಿಯುವುದಿಲ್ಲ. ಅಂದಿನ ಸ್ತ್ರೀಯರ ಸ್ಥಿತಿಗತಿಯನ್ನು, ಸಾರ್ವತ್ರಿಕ ಅನುಭವಗಳನ್ನು ತಮ್ಮ ಸೂಕ್ಷ್ಮ ಸ್ತ್ರೀ ಸಂವೇದನೆಯಲ್ಲಿ ದಾಖಲಿಸಿ ಇಪ್ಪತ್ತನೇ ಶತಮಾನದ ಮೊದಲರ್ಧದ ಮಹಿಳೆಯರ ಮುಖವಾಣಿಯೂ ಆಗುತ್ತಾರೆ. ತನ್ನ ಕಾಲದ ಹೆಣ್ಣುಮಕ್ಕಳ ಪಾಡನ್ನು ಇಷ್ಟೊಂದು ಸಹಜವಾಗಿ ಹಾಡಾಗಿಸಿದ ಜಾನಕಮ್ಮ ನನಗೆ ಸ್ವಾತಂತ್ರ್ಯಪೂರ್ವದ ಮಹತ್ವದ ಕವಿಯಾಗಿ ಕಾಣುತ್ತಾರೆ. ಜಾನಕಮ್ಮ ಆ ಕಾಲದ ಹೆಣ್ಣುಮಕ್ಕಳ ಬದುಕನ್ನು ಬದುಕಿದವರು, ಅಂತರಂಗದ ಅನುಭವದಿಂದ ಬರೆದವರು. ಅನುಭಾವದ ಕಾವ್ಯ ಅವರದು.'[1] ಎಂದು ನೇಮಿಚಂದ್ರರು ಬೆಳಗೆರೆ ಜಾನಕಮ್ಮ ಎಂಬ ಕವಯತ್ರಿ ಮತ್ತು ಅವರ ಕವಿತೆಯ ಮಹತ್ವದ ಬಗ್ಗೆ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾರೆ. 'ಸ್ವ' ಪ್ರಜ್ಞೆಯನ್ನು ಮೆರೆದ ಕವಯತ್ರಿಯಾಗಿ ಬೆಳಗೆರೆ ಜಾನಕಮ್ಮ ಕಾಣಿಸಿಕೊಳ್ಳುತ್ತಾರೆ.

ಸ್ತ್ರೀಯರ ಪುರುಷರ ವಾಗ್ವಾದ ಕೇಳಮ್ಮ
ನ್ಯಾಯಾಸ್ಥಾನದ ದೊಡ್ಡ ತೀರ್ಪು ನೋಡಮ್ಮ
ಅಣಕವಾಡಿದಳೆಂದು ಮುನಿಸುಗೊಳ್ಳುವಿರೇನೋ
ಜನಕಜೆ ಯತ್ನವೆ ಕವಿತೆಯ ತಡೆವುದು?'[2]

ಭಾವ ತುಂಬಿ ಹೊರಹೊಮ್ಮಲು ತವಕಿಸುವ ಕವಿತೆಯನ್ನು ತಡೆಯಲು ತನ್ನಿಂದ ಸಾಧ್ಯವೇ ಎಂದು ಪ್ರಶ್ನಿಸುವ ಕವಯತ್ರಿ ತನಗೂ ಭಾವನೆಗಳಿವೆ, ಕನಸುಗಳಿವೆ ಅವುಗಳನ್ನು ನಿಯಂತ್ರಿಸಲು ಯಾರಿಗೂ ಸಾಧ್ಯವಿಲ್ಲ ಎಂದು ಮಾರ್ಮಿಕವಾಗಿ ಉತ್ತರಿಸಿದ್ದಾರೆ. 'ಗಂಡ' ಎಂಬ ಕವನದಲ್ಲಿ ಹೆಣ್ಣಿನ ಕೌಟುಂಬಿಕ ಸ್ಥಾನಮಾನದ ವಾಸ್ತವಿಕ ಚಿತ್ರವನ್ನು ವ್ಯಂಗ್ಯವಾಗಿ ವಿಶ್ಲೇಷಣೆಗೊಳಪಡಿಸಲಾಗಿದೆ.

ನೋಡು ಮಂಡೂಕ ಸರ್ಪದ ನೆಳಲಿಗೆ ಹೋದಂತೆ
ಬಂಡೀಗೆ ಬಸವನು ಶಿರಬಾಗಿಕಂಡಂತೆ
ಅಧಿಕಾರಿ ನಿನಗವನೊಬ್ಬ – ನಿರುತ ದುಡಿದರೆ ಅಶನದ ಹಬ್ಬ
ತಪ್ಪಿ ಬೇನೆ ಬೇಸರವಾಗಿ ಉಶ್ಶೆನ್ನಲಬ್ಬಬ್ಬ
ಏನಾಯ್ತು ಎಂದು ಗಂಟ್ಹಾಕುವ ಹುಬ್ಬ
ಎಚ್ಚರದಿಂದಿರು ಹೆಣ್ಣೆ– ಇಂತು ಬರೆದಿಹನು ಬ್ರಹ್ಮಣ್ಣ.'[3]

ಸೃಷ್ಟಿಕರ್ತನಾದ ಬ್ರಹ್ಮನೇ ಕೆಲವು ಕಟ್ಟುಕಟ್ಟಳೆಗಳನ್ನು ಹೆಣ್ಣಿಗೆ ವಿಧಿಸಿದ್ದಾನೆ. ಅದರ ಔಚಿತ್ಯವರಿತು ಹೆಣ್ಣು ನಡೆಯಬೇಕು ಎಂದು ಕವಯತ್ರಿ ಹೇಳುವಲ್ಲಿ ತನ್ನ ಸ್ವಂತಿಕೆಯನ್ನು ಉಳಿಸಿಕೊಳ್ಳಬೇಕು ಎಂಬ ಪ್ರಜ್ಞೆಯನ್ನು ಮೂಡಿಸಿದ್ದಾರೆ.

---

[1] ಬಯಲುಸೀಮೆಯ ಹಾಡುಹಕ್ಕಿ ಬೆಳಗೆರೆ ಜಾನಕಮ್ಮ . ನೇಮಿಚಂದ್ರ, ಪು.1, 2

[2] ಕರ್ನಾಟಕದ ಕವಯತ್ರಿಯರು, ಡಾ.ಸರೋಜಿನಿ ಮಹಿಷಿ, ಪು.398

[3] ಕರ್ನಾಟಕದ ಕವಯತ್ರಿಯರು, ಡಾ.ಸರೋಜಿನಿ ಮಹಿಷಿ, ಪು.399

ಮೂಢನಂಬಿಕೆಗಳಿಂದ ಮುಕ್ತವಾದ ಸಮಾಜ ನಿರ್ಮಾಣವಾಗಬೇಕು, ಗಂಡು ಹೆಣ್ಣೆಂಬ ತಾರತಮ್ಯ ನಿಲುವು ಬದಲಾಗಬೇಕು ಎಂಬ ಧೋರಣೆಯನ್ನು ಕವಯತ್ರಿ ಹೊಂದಿದ್ದಾರೆ. 'ಚಂಡಶಾಸನ'ದಲ್ಲಿ ಹೆಣ್ಣಿಗೆ ವಿಧಿಸಿದ ನಿಯಮಗಳನ್ನು ವಿರೋಧಿಸಿ, ಅದಕ್ಕೆ ಕಾರಣಕರ್ತರಾದ ದೇವರ ಮೇಲೆ ಆರೋಪವನ್ನು ಹೊರಿಸುವ ಧೈರ್ಯ, ಆತ್ಮವಿಶ್ವಾಸವನ್ನು ಗುರುತಿಸಬಹುದು.

ಕಸಕ್ಕಿಂತ ಕಡೆಯಾಯ್ತೆ
ಹೆಣ್ಣು ಜನ್ಮವು ನಿನಗೆ
ಈ ಭಾರ ಹೊರಿಸುವುದಕೆ
ಲಂಚಕೋರನು ನೀನು
ವಂಚನೆಯ ಮಾಡಿರುವೆ
ಮೃದುತನದ ಸ್ತ್ರೀವರ್ಗಕೆ'.[4]

ತಮ್ಮ ಬವಣೆಗಳನ್ನು ಅನಿಸಿಕೆಗಳನ್ನು ದೇವನೊಡನೆ ಸರಿಸಾಟಿಯಾಗಿ ಹಂಚಿಕೊಂಡಿರುವುದು ಹೆಣ್ಣಿನಲ್ಲಿ ಕಾಣಿಸಿಕೊಂಡ ಆತ್ಮವಿಶ್ವಾಸದ ಸೂಚನೆಗಳಾಗಿವೆ. ಅವರ ಕವನಗಳಲ್ಲಿ ತಮ್ಮ ಬದುಕಿನೆಲ್ಲಾ ಅನುಭವಗಳ ಪ್ರಾಮಾಣಿಕವಾದ ಅಭಿವ್ಯಕ್ತಿ, ನೋವು, ನಲಿವು, ಬೇಸರ, ಬವಣೆ, ಅಡಚಣೆ, ಆಕ್ಷೇಪ ಎಲ್ಲವನ್ನೂ ನಿಸ್ಸಂಕೋಚವಾಗಿ ತೆರೆದಿಟ್ಟಿರುವುದರಿಂದ ಅವರು ಎಲ್ಲರಿಗೂ ತುಂಬಾ ಆಪ್ತರಾಗುತ್ತಾರೆ ಎನ್ನುತ್ತಾರೆ ನೇಮಿಚಂದ್ರ. 'ಜಾನಕಮ್ಮನ ಬದುಕು ಅಂದಿನ ಓರ್ವ ಸಾಮಾನ್ಯ ಹೆಣ್ಣಿನ ಅನುಭವಗಳಿಂದ ಬೇರೆಯಾಗಿರಲಿಲ್ಲ. ಅವರ ಬದುಕು ಅಂದಿನ ಮಹಿಳಾ ಜೀವನದ ಸಾರ್ವತ್ರಿಕವಾಗಿ ಪ್ರತಿಬಿಂಬಿಸುವ ಉತ್ತಮ ಉದಾಹರಣೆಯಾಗಿದೆ. ಜಾನಕಮ್ಮನ ಜೀವನ ವಿಶಿಷ್ಟವಾಗುವುದು ಆ ಬದುಕನ್ನು ಕಾವ್ಯಪೂರಿತವಾಗಿ ದಾಖಲಿಸುವ ವಿಧಾನದಲ್ಲಿ. ಸ್ತ್ರೀ ಸಂವೇದನೆಯ ಮೊಟ್ಟಮೊದಲ ತುಣುಕುಗಳನ್ನು ಇವರ ಕವನಗಳಲ್ಲಿ ಕಾಣಬಹುದು. ಕವಿಗಳ ಕಾವ್ಯದಲ್ಲಿ ಹೆಣ್ಣು ಹೇರಳವಾಗಿ ಮೂಡಿ ಬಂದಿದ್ದರೂ, ಅವಳ ಅಂತರಂಗದ ಗುಟ್ಟುಗಳು, ಅನುಭವಗಳು, ಅವಳ ಎದೆಯಾಳದ ನುಡಿಗಳು, ಪಿಸುಮಾತುಗಳು, ಹಸಿ ಅನಿಸಿಕೆಗಳು ಸ್ಪಷ್ಟವಾಗಿ ಕೇಳಿಬರುವುದು ಜಾನಕಮ್ಮನ ಕವನಗಳಲ್ಲಿ. ಹಾಗೆಂದೇ ಅವರ ಸ್ತ್ರೀ ಸಂವೇದನಾ ಕವನಗಳು ಹೆಚ್ಚು ಯಶಸ್ವಿಯಾಗಿವೆ, ಆತ್ಮೀಯವಾಗಿವೆ. ಇಂದಿಗೂ ಹೆಚ್ಚು ಬದಲಾಗಿಲ್ಲದ ಸ್ತ್ರೀಯರ ಸ್ಥಿತಿಗತಿಯಲ್ಲಿ ಸಮಕಾಲೀನವೂ ಆಗಿರುವುದುಂಟು.'[5] ಎನ್ನುವ ಮಾತುಗಳು ಬೆಳಗೆರೆ ಜಾನಕಮ್ಮನವರ ಕವಿತೆಯ ವೈಶಿಷ್ಟ್ಯವನ್ನು ಎತ್ತಿ ಹಿಡಿಯುತ್ತದೆ ಜೊತೆಗೆ ಜಾನಕಮ್ಮ ಬಹಳ ಪ್ರಾಮಾಣಿಕವಾದ ವ್ಯಕ್ತಿತ್ವ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ.

'ಹೆಣ್ಣಾಟ', ಮರುಳಮ್ಮ ಮರುಳು', 'ಗಂಡ', ಚಂಡಶಾಸನ', ದುರ್ದೈವಿ' ಈ ಮೊದಲಾದ ಅವರ ಕವಿತೆಗಳಲ್ಲಿ ಮಹಿಳಾ ಅಸ್ತಿತ್ವದ ವಿವಿಧ ಮಗ್ಗುಲಗಳನ್ನು ಗುರುತಿಸಬಹುದಾಗಿದೆ. ಅವರೆಲ್ಲಾ ಕವನಗಳನ್ನೊಳಗೊಂಡ 'ಕಲ್ಯಾಣ' ಎಂಬ ಕವನ ಸಂಕಲನ ದ.ರಾ ಬೇಂದ್ರೆಯವರ ಮುನ್ನುಡಿಯೊಂದಿಗೆ ಜಾನಕಮ್ಮನ ಮರಣಾ ನಂತರ ಪ್ರಕಟವಾಯಿತು. ಇದು ಅವರ ಸಾಹಿತ್ಯ ಸೇವೆಗೆ ಸಂದ ಗೌರವವೆಂದೇ ಹೇಳಬಹುದು.

**ಜಯದೇವಿ ತಾಯಿ ಲಿಗಾಡೆ**

ಮರಾಠೀ ಭಾಷೆಯಲ್ಲಿ ವಿದ್ಯಾಭ್ಯಾಸ ಪಡೆದ ಜಯದೇವಿ ತಾಯಿಯವರು ಕನ್ನಡ ಮಾತೃಭಾಷೆಯವರಾಗಿದ್ದಾರೆ. ಮನದಾಳದ ಅನುಭವಗಳ ಅಭಿವ್ಯಕ್ತಿಗೆ ಕನ್ನಡವೇ ಸಹಜ ಮತ್ತು ಸಮರ್ಥ ವಾಹಕ ಎಂಬ ಅಭಿಪ್ರಾಯ ಅವರದು. ಹನ್ನೆರಡನೆಯ ಶತಮಾನದಲ್ಲಿ ಶಿವಶರಣರು ಕೈಗೊಂಡಿದ್ದ ಕಾರ್ಯಗಳನ್ನು ಇಪ್ಪತ್ತನೆಯ ಶತಮಾನದಲ್ಲಿ ಗಾಂಧೀಜಿಯವರು

---

[4] ಕರ್ನಾಟಕದ ಕವಯತ್ರಿಯರು, ಡಾ.ಸರೋಜಿನಿ ಮಹಿಷಿ, ಪು.399

[5] ಬಯಲು ಸೀಮೆಯ ಹಾಡುಹಕ್ಕಿ ಬೆಳಗೆರೆ ಜಾನಕಮ್ಮ , ನೇಮಿಚಂದ್ರ, ಪು.30

ನಡೆಸಿದ ಚಳುವಳಿಯನ್ನು ಆದರ್ಶವಾಗಿಟ್ಟುಕೊಂಡು ಸಮಾಜ ಸೇವೆಗಿಳಿದವರು ಜಯದೇವಿತಾಯಿ. 'ಮಹಿಳಾ ಜ್ಞಾನ ಮಂದಿರ'ದ ಮೂಲಕ ಜಯದೇವಿತಾಯಿಯವರ ಸಾಮಾಜಿಕ ಚಟುವಟಿಕೆಗಳು ಆರಂಭವಾದುದನ್ನು ಗುರುತಿಸಲು ಸಾಧ್ಯವಾಗುವುದು. ವೀರಶೈವ ಮಹಾಸಭೆಯ ಮಹಿಳಾ ಪರಿಷತ್ತಿನ ಅಧ್ಯಕ್ಷೆಯಾಗಿ ಮಹಿಳೆಯರ ಶಿಕ್ಷಣಕ್ಕೆ ಒತ್ತು ಕೊಟ್ಟು ಆಡಿದ ಮಾತುಗಳು ಬಹಳ ಮುಖ್ಯವಾಗುತ್ತವೆ. 'ನಮ್ಮ ದೇಶದ ಸಂಸ್ಕೃತಿಯನ್ನು ನಾವು ಉಳಿಸಿಕೊಂಡರೆ ಪರಕೀಯರ ಅನುಕರಣೆಗೆ ಅವಕಾಶವಿರುವುದಿಲ್ಲ. ಮನೆಯ ನಿರ್ವಹಣೆಯಲ್ಲಿ ಅವರು ಅರ್ಧ ಪಾಲುದಾರರು, ಅರ್ಧಾಂಗಿನಿಯರು. ಅಡಿಗೆ, ಆರೋಗ್ಯ, ಮಕ್ಕಳ ಲಾಲನೆ ಪಾಲನೆ ಮಹಿಳೆಯಿಂದಲೇ ನಡೆಯುವಂತಹವು. ಮನೆ ಚೆನ್ನಾಗಿ ನಡೆಯಬೇಕೆಂದರೆ, ಮಹಿಳೆ ಸುಶಿಕ್ಷಿತಳಾಗಬೇಕು. ಮಹಿಳೆಯ ಸರ್ವಾಂಗೀಣ ಅಭಿವೃದ್ಧಿಗೆ ಶಿಕ್ಷಣ ಬೇಕೇ ಬೇಕು. ಹಿಂದೆಂದಿಗಿಂತ ಇಂದು ವಿದ್ಯಾಭ್ಯಾಸದ ಸವಲತ್ತುಗಳು ಹೆಚ್ಚಿವೆ. ಅವುಗಳ ಉಪಯೋಗ ಮಾಡಿಕೊಂಡು ಮಹಿಳೆ, ಪುರುಷನಿಗೆ ಸಮಾನವಾದ ಸ್ಥಾನಮಾನಗಳನ್ನು ಪಡೆಯಬೇಕು.'[6] ಮಹಿಳೆಯಲ್ಲಿ 'ಸ್ವ' ದ ಅರಿವನ್ನು ಮೂಡಿಸುವ ಕಾರ್ಯಗಳು ಆಧುನಿಕ ಯುಗದ ಆರಂಭದಲ್ಲೇ ಆಗಿದ್ದವು ಎನ್ನುವುದನ್ನು ತಿಳಿಯಲು ಸಾಧ್ಯವಾಗುವುದು. ಸಮಾಜದ ಶೋಷಣೆಯ ಮೂಲ ಇರುವುದೇ ಜನರ ಅಜ್ಞಾನದಲ್ಲಿ, ಅನಕ್ಷರತೆಯಲ್ಲಿ. ಅಜ್ಞಾನ ಹೊಡೆದೋಡಿಸಲು ಶಿಕ್ಷಣ ಪರಿಣಾಮಕಾರಿ ಅಸ್ತ್ರವಾಗುವುದು. ಶಿಕ್ಷಣವೆಂದರೆ ಬರೀ ಅಕ್ಷರಜ್ಞಾನವಲ್ಲ, ಒಂದೆರಡು ಭಾಷೆಗಳನ್ನು ಕಲಿತು ಮಾತನಾಡುವುದಲ್ಲ. ಅದೊಂದು ಸಂಸ್ಕಾರ. ಅದರಿಂದ ಸುಸಂಸ್ಕೃತರಾಗಬೇಕು. ಶಿಕ್ಷಣದ ಬಲದಿಂದ ಸುಂದರ ಬದುಕನ್ನು ರೂಪಿಸಿಕೊಂಡು ಸುಖಮಯವಾಗಿ ಬಾಳಬೇಕೆಂದು ಅವರ ಆಶಯವಾಗಿತ್ತು ಎನ್ನುವುದು ಈ ಮಾತುಗಳ ಮೂಲಧ್ವನಿಯಾಗಿದೆ. ತಮ್ಮ ಭಾಷಣದುದ್ದಕ್ಕೂ ಮಹಿಳೆಯ ವ್ಯಕ್ತಿತ್ವದ ಬದಲಾವಣೆಯನ್ನು ಆಗ್ರಹಿಸುತ್ತಿದ್ದುದಲ್ಲದೆ ಬದಲಾದ ಬದುಕಿನಲ್ಲಿ ಹೆಣ್ಣು ಹೇಗೆ ತನ್ನತನವನ್ನು ಉಳಿಸಿಕೊಳ್ಳಬೇಕು ಎಂಬುದರ ಕಡೆಗೆ ಹೆಚ್ಚು ಒತ್ತು ಕೊಡುತ್ತಿದ್ದರು ಆ ಮೂಲಕ ಜಯದೇವಿಯವರಿಗಿದ್ದ ಮಹಿಳೆಯ ಮೇಲಿನ ಕಾಳಜಿ ವ್ಯಕ್ತವಾಗುತ್ತದೆ. ಬಸವಣ್ಣ, ಗಾಂಧೀಜಿ ಮೊದಲಾದವರು ಸ್ತ್ರೀ ಸಮಾನತೆಗಾಗಿ ಹೋರಾಡಿರುವುದು ಜಯದೇವಿತಾಯಿಯ ಮೇಲೆ ಅಗಾಧ ಪ್ರೇರಣೆಯನ್ನು ಬೀರಿರುವುದನ್ನು ಗುರುತಿಸಬಹುದು.

ಜಯದೇವಿತಾಯಿ ಬರೆದ ಸಾಹಿತ್ಯ ಕೃತಿಗಳು ಸಂಖ್ಯೆಯಿಂದಲೂ, ಗುಣದಿಂದಲೂ ಶ್ರೀಮಂತವಾಗಿವೆ. ಅವುಗಳನ್ನು ಸೃಜನ ಮತ್ತು ಸೃಜನೇತರ ಎಂದು ವಿಭಾಗಿಸಲಾಗಿದೆ. ಸೃಜನ ಸಾಹಿತ್ಯವೆಲ್ಲವೂ ಕಾವ್ಯರೂಪದಲ್ಲಿದೆ. ಸೃಜನೇತರ ಸಾಹಿತ್ಯ ಅನುವಾದ ರೂಪದಲ್ಲಿದೆ. ಸೃಜನಶೀಲ ಸಾಹಿತ್ಯದಲ್ಲಿ ತ್ರಿಪದಿಗಳೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಇನ್ನು ಅವರ ಅನುಭವದ ಪದಗಳು ಬಹಳ ಮುಖ್ಯವಾಗುತ್ತದೆ. ಇವನ್ನೆಲ್ಲಾ ನೋಡಿದರೆ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಜಯದೇವಿತಾಯಿಯನ್ನು ಹಾಡುಗಬ್ಬದ ಕವಯತ್ರಿಯಾಗಿ ಗುರುತಿಸಿಕೊಳ್ಳಲು ಸಾಧ್ಯವಾಗುವುದು. ಕನ್ನಡದಲ್ಲಿ 'ಜಯಗೀತ' ಅವರ ಪ್ರಥಮ ಕಾವ್ಯ ಸಂಕಲನ. ಮೌಖಿಕ ಮಹಾಕಾವ್ಯಗಳ ಪರಂಪರೆಯ ಬೆಳಕಿನಲ್ಲಿ ಶಿಷ್ಟ ಕಾವ್ಯವನ್ನು ರಚಿಸಿದ ಶ್ರೇಯಸ್ಸು ಪಡೆದಿದ್ದಾರೆ. ಹೆಣ್ಣಿನ ಸಾಮರ್ಥ್ಯದಲ್ಲಿ ಕವಯತ್ರಿಗಿರುವ ವಿಶ್ವಾಸ, ಒಂದು ಕವನದಲ್ಲಿ ಪ್ರಕಟವಾದ ರೀತಿ,

ಚೆನ್ನಮ್ಮನ ಶೌರ್ಯ, ಹೊನ್ನಮ್ಮನ ಕಾವ್ಯ, ಮಹತಿ ಮಹಾದೇವಿಯಕ್ಕನ
ನೆನೆವರ ಕಣ್ಣಿದ್ದ ಕುರುಡರು, ಕಾಣುವರ ಕಾಣುವರ
ಕುರುಡರು, ನಾಡಿನ ಕತ್ತಲೆ ಕಳೆದೀತ!
ಹೆಣ್ಣಾಗಿ ಹುಟ್ಟಿದಿರಿ ಜಗದಿ, ಸಣ್ಣಾಗೀ ದುಡಿದೀರಿ
ಅನುಮಾನ ಸುಟ್ಟೀರಿ ನೀವು, ಸುಣ್ಣಾಗಿ ಸುಟ್ಟೀರೆ ಜಗದ
ಕಣ್ಣಾದಿರೆ ನೀವು, ಕೊಳ್ಳಿರೇ, ಹೆಮ್ಮಗಳ ನಿಮ್ಮ, ಲೋಕೆಲ್ಲ ನಮ್ಮ ಬಳಗ'[7]

---

[6] ಜಯದೇವಿತಾಯಿ ಲಿಗಾಡೆ . ರಾಮಕೃಷ್ಣ ಮರಾಠೆ,ಪು.71,72

[7] ಕರ್ನಾಟಕದ ಕವಯತ್ರಿಯರು, ಡಾ.ಸರೋಜಿನಿ ಮಹಿಷಿ, ಪು.404

**AKSHARASURYA**
Peer-Reviewed, Multi Lingual E-Journal
Volume – 01, Issue – 03, December 2022.

ಸ್ತ್ರೀಯ ತಪಸ್ಸಿನ ಶಕ್ತಿಯಿಂದಲೇ ಬದುಕು ಪರಮ ಪಾವನವಾಗಲು ಸಾಧ್ಯ ಎಂಬ ನಿಲುವು ಕವನದಲ್ಲಿದೆ.

ಕನ್ನಡದ ಹಿರಿಯ ಸಾಹಿತಿಗಳಾದ ವಿ.ಕೃ ಗೋಕಾಕ್, ಡಿ ಎಸ್ ಕರ್ಕಿ, ಪಾಟೀಲ ಪುಟ್ಟಪ್ಪ, ಶಾಂತರಸ, ಸಾ.ಶಿ ಮರುಳಯ್ಯ ಮೊದಲಾದವರು ಜಯದೇವಿಯತಾಯಿಯ ಹಾಡುಗಳನ್ನು ಅವರಿಂದಲೇ ಹಾಡಿಸಿ ಕೇಳಿ ಸಂತೋಷಪಟ್ಟಿದ್ದಾರೆ ಎನ್ನುವುದು ಜಯದೇವಿತಾಯಿಗಿದ್ದ ಹಾಡಿನ ಕುರಿತ ಸಾಮರ್ಥ್ಯವನ್ನು ತಿಳಿಯಪಡಿಸುತ್ತದೆ. ಮಾತ್ರವಲ್ಲ ಈ ಸಂದರ್ಭದಿಂದಲೇ ಹೆಣ್ಣನ್ನು ಗೌರವಿಸುತ್ತಾ, ಪ್ರೋತ್ಸಾಹಿಸುತ್ತಾ ಬಂದ ಒಂದು ಸಾಹಿತ್ಯ ವರ್ಗ ಬೆಳೆದಿತ್ತು ಎನ್ನುವುದನ್ನು ತಿಳಿಯಬಹುದು. ಜಯದೇವಿತಾಯಿ ತಾನು ತನ್ನ ಅಭಿವ್ಯಕ್ತಿಗೆ ಮುಖ್ಯ ಮಾಧ್ಯಮವಾಗಿ ತ್ರಿಪದಿಯನ್ನು ಆಯ್ಕೆ ಮಾಡಿಕೊಂಡುದರ ಬಗ್ಗೆ ಹೀಗೆ ಹೇಳುತ್ತಾರೆ. 'ಜಯಗೀತ' ಬರೆದ ಬಳಿಕ ಭಾವನೆಗಳಿಗೆ ಭಾಷೆಯ ರೂಪ ಕೊಡುವಾಗಲೆಲ್ಲಾ ಬಾಲ್ಯದಲ್ಲಿ ಕೇಳಿದ ತ್ರಿಪದಿಯ ಗತಿ ತುಂಬಾ ಹಿಡಿಸಿತು. ಕನ್ನಡದ ಜಾಯಮಾನಕ್ಕೆ ಹೊಂದಿಕೊಂಡು ಬೆಳೆದು ಬಂದ ತ್ರಿಪದಿಯ ಆ ಧಾಟಿ ಬಹು ರಮ್ಯವೆನಿಸಿತು. ಆಗಾಗ ರಚಿಸಿ ಹಾಡುತ್ತಾ ಬಂದ ಕೆಲವು ತ್ರಿಪದಿಗಳನ್ನು ಒಂದೆಡೆ ಕೂಡಿಸಿ ನೋಡಿದಾಗ ಇವು ಕನ್ನಡ ನಾಡ ತಾಯಂದಿರ ಹಾಡಿನ ಜಾಡನ್ನು ಅನುಸರಿಸಿ ಮುಂದುವರಿದುದು ಮನಸ್ಸಿಗೆ ಅಪ್ಯಾಯಮಾನವಾಗಿ ಕಂಡಿತು.'[8] ಈ ಅನುಭವದ ಮಾತುಗಳಲ್ಲಿ ಅವರಿಗೂ ತ್ರಿಪದಿಗೂ ಇರುವ ನಂಟು ತಿಳಿದುಬರುತ್ತದೆ. ಜನಪದರು ಎನ್ನುವ ಒಂದು ಮುಗ್ಧವಾದ ಸಮೂಹ ಬಹಳ ಮುಕ್ತವಾಗಿ ತಮ್ಮನ್ನು ತೆರೆದಿಟ್ಟುಕೊಂಡಿರುವುದು ಸಹಜವಾಗಿ ಇವರ ಮೇಲೂ ಪರಿಣಾಮ ಬೀರಿರುವುದನ್ನು ಇಲ್ಲಿ ಗುರುತಿಸಲು ಸಾಧ್ಯವಾಗುವುದು.

ಜಯದೇವಿತಾಯಿ ಸಹಜ ಕವಯತ್ರಿ. ತನಗೊಲಿವ ದೇಸೀ ಛಂದಸ್ಸು ತ್ರಿಪದಿಯಲ್ಲಿ ಸು. ಸಾವಿರದಷ್ಟು ಪದಗಳನ್ನು ಬರೆದಿರುವರು. 'ಶ್ರೀ ಸಿದ್ಧರಾಮೇಶ್ವರ ಮಹಾಪುರಾಣ' ರಚಿಸಿದರು. ನೆರೆಮನೆಯ ಮರಾಠಿಗರಿಗೆ ಶರಣರ ಜೀವನ, ಸಾಹಿತ್ಯ ತಿಳಿಸಿಕೊಡಬೇಕೆಂದು ವಚನಗಳನ್ನು ಮರಾಠಿಗೆ ಅನುವಾದಿಸಿದರು. ಅವರದು ಕಲಂಕರಹಿತ ನಿಸ್ವಾರ್ಥ ಮನಸ್ಸು ಎನ್ನುವುದನ್ನು ತಿಳಿಯಲು ಸಾಧ್ಯವಾಗುವುದು. ಅವರಿಗೆ ಕರ್ನಾಟಕವೇ ಕುಲವಾಗಿತ್ತು. ಕನ್ನಡವೇ ಧ್ಯೇಯವಾಗಿತ್ತು. 1974 ರಲ್ಲಿ ಮಂಡ್ಯದಲ್ಲಿ ನಡೆದ ಅಖಿಲ ಭಾರತ 48ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆಯಾದರು. ಅಖಿಲ ಭಾರತ ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿಯೇ ಮೊದಲ ಮಹಿಳಾ ಅಧ್ಯಕ್ಷೆ ಎಂಬ ಕೀರ್ತಿ ಜಯದೇವಿತಾಯಿ ಲಿಗಾಡೆ ಅವರದು.

**ತಿರುಮಲೆ ರಾಜಮ್ಮ**

ಇಪ್ಪತ್ತನೆಯ ಶತಮಾನದ ವೇಳೆಗೆ ಕಾವ್ಯಕ್ಷೇತ್ರದಲ್ಲಿ ತನ್ನದೇ ಛಾಪನ್ನು ಮೂಡಿಸಿದವರು 'ಭಾರತೀ' ಕಾವ್ಯನಾಮದ ತಿರುಮಲೆ ರಾಜಮ್ಮ. ಸಾಹಿತಿಗಳ ಜತೆಗಿನ ಒಡನಾಟ, ಶಿಕ್ಷಣದಲ್ಲುಂಟಾದ ಕ್ರಾಂತಿ ಇವರ ಮೇಲೆ ಆಗಾಧ ಪರಿಣಾಮ ಬೀರಿವೆ. ಇದು ಹೊಸ ಬದಲಾವಣೆಗೆ ನಾಂದಿ ಹಾಡಿದೆ. ಅಸ್ಮಿತೆಯ ಪ್ರಕಾಶನಕ್ಕೆ ಕಾವ್ಯ ಒಂದು ಉತ್ತಮ ಮಾಧ್ಯಮವಾಯಿತು. ಸಹಜ ಪ್ರತಿಭೆಯ ಜೊತೆಗೆ ಪಾಂಡಿತ್ಯವೂ, ಜೀವನಾನುಭವೂ ಬೆರೆತುದರಿಂದ ನವ ಆಶಯವನ್ನೊಳಗೊಂಡ ಕಾವ್ಯಗಳ ರಚನೆಯನ್ನು ಕವಯತ್ರಿ ಕೈಗೊಂಡಿದ್ದಾರೆ.

1943 ನೆಯ ಇಸವಿಯಲ್ಲಿ ಶಿವಮೊಗ್ಗೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಮಹಿಳಾ ಗೋಷ್ಠಿಯ ಅಧ್ಯಕ್ಷ ಪೀಠವನ್ನು ತಿರುಮಲೆ ರಾಜಮ್ಮ ಅಲಂಕರಿಸಿದುದು ಮಹತ್ವದ ಸಂಗತಿ. ಬಹುಮುಖ ಪ್ರತಿಭೆಯ ರಾಜಮ್ಮನವರ 'ತಪಸ್ವಿನಿ' ರಾಮಾಯಣದ ಅಲಕ್ಷಿತ ಪಾತ್ರವೆನಿಸಿದ ಊರ್ಮಿಳೆಯನ್ನು ನಾಯಿಕೆಯನ್ನಾಗಿಸಿದ ಕಾವ್ಯ ನಾಟಕ.

ನಿನ್ನ ಧರ್ಮದ ಬಲವೆ, ಎನ್ನ ಜೀವದ ಕಳೆಯು

---

[8] ಜಯದೇವಿತಾಯಿ ಲಿಗಾಡೆ,ರಾಮಕೃಷ್ಣ ಮರಾಠೆ, ಪು.82

ನಿನ್ನ ಪ್ರೇಮದ ಗೆಲುವೆ ಎನ್ನ ಪೆರ್ಮೆಯು ದೇವಿ'[9]

ತನ್ನ ಮೌನದಿಂದಲೇ ಹಿರಿದಾದ ವ್ಯಕ್ತಿತ್ವವನ್ನು ಗಳಿಸಿಕೊಂಡ ಊರ್ಮಿಳೆಯ ಬಗ್ಗೆ ಲಕ್ಷ್ಮಣನಿಂದ ಹೆಗ್ಗಳಿಕೆಯ ಮಾತುಗಳನ್ನು ನುಡಿಸಿದ್ದಾರೆ ಕವಯತ್ರಿ. ಇನ್ನೊಂದೆಡೆ ಸಾಮಾಜಿಕ ಸಂಪ್ರದಾಯವಾಗಿ ಸತಿ ಹೋಗುವುದರ ಕುರಿತು ಕಾಳಜಿ ಹೊಂದಿರುವ ಕವಯತ್ರಿ, ಈ ಪದ್ಧತಿ ಹೆಣ್ಣಿನ ಬದುಕಿಗೆ ಘಾಸಿಯನ್ನುಂಟುಮಾಡುವುದು ಎಂಬುದನ್ನು 'ಮಹಾಸತಿ' ಕಾವ್ಯ ನಾಟಕದಲ್ಲಿ ಪ್ರಸ್ತುತ ಪಡಿಸಿದ್ದಾರೆ. ಈ ಕಾವ್ಯದಲ್ಲಿನ ಶಾಸನೋಕ್ತ ದೇಕಬ್ಬೆಯ ನಿರ್ಧಾರದ ಹಿಂದಿನ ದೃಢತೆಯನ್ನು

ವೀರ ಸತಿಗಿಲ್ಲಿ ನ್ಯಾಯಾವಲಂಬನವೆಲ್ಲಿ
ಹೀನ ಬರಹದ ಅನುಗ್ರಹಕೆ ನಾ ಮಣಿಯೆ
ಆ ಬರಹವನು ತೊಡೆವುದೇ ಸಮಾಧಾನ
ಎನ್ನೆಗಾದರೂ ಬಾಳು ಮಣ್ಣ ಬೆರೆವುದು ತಾಯೇ'[10]

ಎಂದು ವಿಶ್ಲೇಷಣೆಗೊಳಪಡಿಸಿದ್ದಾರೆ. ಈ ಸಾಲಿನಲ್ಲಿ ವ್ಯಕ್ತವಾಗುವ ಧ್ವನಿ ಹೆಣ್ಣಿನ ಆಂತರ್ಯದಲ್ಲಾದ ಚೇತರಿಕೆಯ ಲಕ್ಷಣ. ಸಂಗೀತ ಸಾಹಿತ್ಯಗಳೆರಡನ್ನೂ ಸರಿ ಸಮಾನವಾಗಿ ಚಿಕ್ಕ ವಯಸ್ಸಿನಲ್ಲಿಯೇ ಆರ್ಜಿಸಿಕೊಂಡ ಹಿರಿಮೆ ತಿರುಮಲೆ ರಾಜಮ್ಮನವರದು. ರಾಜಕೀಯ ಕ್ಷೇತ್ರದಲ್ಲೂ ಸಕ್ರಿಯವಾಗಿ ತೊಡಗಿಸಿಕೊಂಡ ಕವಯತ್ರಿ ಗಾಂಧೀಜಿಯವರಿಂದ ಪ್ರಭಾವಿತಗೊಂಡಿದ್ದರು. ಪತಿ ತಿರುಮಲೆ ತಾತಾಚಾರ್ಯ ಶರ್ಮರು ಸಾಹಿತಿಗಳು, ಕ್ರಾಂತಿಕಾರೀ ವ್ಯಕ್ತಿತ್ವದವರೂ ಆಗಿದ್ದುದರಿಂದ ಪರಸ್ಪರ ಸಹಕಾರ ಮನೋಭಾವದಿಂದ ಕೆಲಸ ನಿರ್ವಹಿಸಿರುವುದನ್ನು ಗುರುತಿಸಲಾಗಿದೆ. ತಿರುಮಲೆ ರಾಜಮ್ಮನವರು ದೇಶಪ್ರೇಮದ ಬಗ್ಗೆ, ರಾಷ್ಟ್ರಪ್ರೇಮಿಗಳ ಬಗ್ಗೆ ಅದೆಷ್ಟೋ ಬಿಡಿ ಕವನಗಳನ್ನು ರಚಿಸಿರುವುದು ಮಹಿಳಾ ಅಸ್ತಿತ್ವದ ಪ್ರತೀಕವಾಗಿ ಗುರುತಿಸಲು ಸಾಧ್ಯವಾಗುವುದು. ಅವರ ಎಲ್ಲಾ ಹಾಡುಗಳಲ್ಲಿಯೂ ಬ್ರಿಟಿಷರ ಖಂಡನೆ, ದೇಶಪ್ರೇಮ ಎದ್ದು ಕಾಣುತ್ತಿದ್ದುದ್ದು ಅಂದಿನ ಸಮಾಜದಲ್ಲಿ ಹೆಣ್ಣಿಗೆ ದೊರಕಿದ ಮುಕ್ತ ವಾತಾವರಣದ ಸೂಚನೆಯಾಗಿದೆ. ತಿರುಮಲೆ ರಾಜಮ್ಮನವರ ಸುಭಾಷಿತದಂತಿರುವ ಒಂದು ಮಾತು ಮಾರ್ಗದರ್ಶಕ ಸೂತ್ರದಂತಿದೆ 'ಅನುಭವದ ಕೊರತೆ ಮತ್ತು ಅಜ್ಞಾನದಿಂದ ಕೆಲಸ ಕೆಡುತ್ತದೆ, ಅಪಾಯ ಎದುರಾಗುತ್ತದೆ.' ತಮ್ಮ ಅನುಭವದಿಂದ ನುಡಿದ ಈ ಮಾತುಗಳು ಜೀವನದ ಸಾಧನೆಯ ಹಾದಿಗೆ ಹಾಸುಗಲ್ಲಾಗಿದೆ. ತಾನು ಬಹಳ ಆತ್ಮವಿಶ್ವಾಸದಿಂದ ಜೀವನದ ಸಂಕೀರ್ಣ ಘಟ್ಟಗಳನ್ನು ಹಾದು ಬಂದಿದ್ದೇನೆ, ಅದು ನನ್ನಲ್ಲಿಯೇ ನಿಲ್ಲಬಾರದು, ಮುಂದಿನವರಿಗೂ ಪ್ರೇರಣೆಯಾಗಬೇಕು ಎಂಬ ಮನೋಭಾವವನ್ನು ಈ ಮಾತುಗಳಲ್ಲಿ ಗುರುತಿಸಲು ಸಾಧ್ಯವಾಗುವುದು. 'ಆಡು ಮುಟ್ಟದ ಸೊಪ್ಪಿಲ್ಲ' ಎನ್ನುವ ಹಾಗೆ ರಾಜಮ್ಮನವರು ಕೈ ಹಾಕದ ಸಾಹಿತ್ಯ ವಿಭಾಗವಿಲ್ಲ. ಇವರು ರಚಿಸಿರುವ ಸಾಹಿತ್ಯದಲ್ಲೂ ಸಂಗೀತದಲ್ಲೂ ದೇಶಭಕ್ತಿಯ ಸೊಗಡಿದೆ. ಎಲ್ಲದರಲ್ಲಿಯೂ ಉನ್ನತ ಆದರ್ಶ, ಜೀವನವನ್ನು ಮೇಲಕ್ಕೆತ್ತುವ ತತ್ವ ಅಡಗಿರುವುದು ಸ್ವಸ್ಥ ಸಮಾಜದ ರೂಪೀಕರಣದ ಆಶಯದ ಉದ್ದೇಶದಿಂದ ಎನ್ನುವುದನ್ನು ತಿಳಿದುಕೊಳ್ಳಲು ಸಾಧ್ಯವಾಗುವುದು

ಇವರೆಲ್ಲರ ಸಮಕಾಲೀನರಾಗಿ ಕಾಣಿಸಿಕೊಳ್ಳುವ ಹಾಡಿನ ವೆಂಕಮ್ಮ, ಎಂ.ಬಿ. ಗೌರಮ್ಮ, ಪಾರ್ವತೀದೇವಿ ಹೆಗಡೆ, ಕರವೀರ ಶೆಟ್ಟರ ಸಂಗಮ್ಮಾ, ಕೃಷ್ಣಾಬಾಯಿ, ಶ್ರೀಮತಿ ಗುರುಲಿಂಗಮ್ಮಾ ಖಾಸಬಾಗ ಈ ಮುಂತಾದ ಕವಯತ್ರಿಯರು ಕಾವ್ಯ ಕ್ಷೇತ್ರವನ್ನು ಉಜ್ವಲವಾಗಿಸಿದ್ದಾರೆ. ತಮ್ಮ ಅನುಭವಗಳನ್ನು ಕಾವ್ಯದ ಮೂಲಕ ಮೂರ್ತರೂಪಕ್ಕಿಳಿಸಿದ್ದಾರೆ. ಐತಿಹಾಸಿಕ, ಪೌರಾಣಿಕ ವಸ್ತುಗಳಿಗೆ ಹೆಚ್ಚಿನ ಪ್ರಾಧಾನ್ಯ ನೀಡಿದರೂ ಅನುಭವಗಳ ಅನನ್ಯ ಸ್ವರೂಪ ಕಾವ್ಯದಲ್ಲಿ ಎಳೆಎಳೆಯಾಗಿ ಮೂಡಿಬಂದಿದೆ. ನಿರ್ಬಂಧಗಳನ್ನು ಕಳಚಿ ಭಾವಪೂರ್ಣವಾಗಿ, ಧ್ವನ್ಯಾತ್ಮಕವಾಗಿ ಕವನ ರಚನೆಯನ್ನು ಮಾಡಿದ್ದಾರೆ.

[9] ಕರ್ನಾಟಕದ ಕವಯತ್ರಿಯರು, ಡಾ.ಸರೋಜಿನಿ ಮಹಿಷಿ, .ಪು.387

[10] ಕರ್ನಾಟಕದ ಕವಯತ್ರಿಯರು, ಡಾ.ಸರೋಜಿನಿ ಮಹಿಷಿ, ಪು.389

ತಿರುಮಲೆ ರಾಜಮ್ಮ ಮತ್ತು ಜಯದೇವಿ ತಾಯಿ ಲಿಗಾಡೆಯವರಿಗೆ ಉತ್ತಮ ಶಿಕ್ಷಣ ದೊರೆತುದರ ಜೊತೆಗೆ ಸಾಮಾಜಿಕವಾಗಿಯೂ ಸಂಪರ್ಕ ಬೆಳೆಸಿಕೊಳ್ಳಲು ಅವಕಾಶ ಒದಗಿ ಬಂದಿರುವುದನ್ನು ಗುರುತಿಸಲಾಗಿದೆ. ಇವರು ಕಾವ್ಯದ ಜೊತೆಗೆ ಕಾವ್ಯದ ಇನ್ನಿತರ ರೂಪಗಳಲ್ಲೂ ಪ್ರಯೋಗ ನಡೆಸಿ ಸೈ ಎನ್ನಿಸಿಕೊಂಡಿದ್ದಾರೆ. ಮಹಿಳೆಯಾಗಿ ಸಮಾಜದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಇವರಿಬ್ಬರಿಗಿಂತಲೂ ವ್ಯತ್ಯಸ್ತವಾದ ವ್ಯಕ್ತಿತ್ವ ಬೆಳಗೆರೆ ಜಾನಕಮ್ಮನದು. ಮನೆಯ ಕಟ್ಟುಪಾಡುಗಳಿಗೂ ಒಳಗಾಗಿ, ಹೆಚ್ಚೇನೂ ವಿದ್ಯಾಭ್ಯಾಸವನ್ನು ಪಡೆಯದೆ, ತಮ್ಮದೇ ಆದ ಚೌಕಟ್ಟಿನಲ್ಲಿ ಅಗಾಧ ಪ್ರಮಾಣದಲ್ಲಿ ಕವಿತೆಗಳನ್ನು ರಚಿಸಿ ಬಹಳ ಚಿಕ್ಕ ವಯಸ್ಸಿನಲ್ಲಿ ವಿಧಿವಶರಾದವರು. ಆಧುನಿಕ ಯುಗದ ಆರಂಭಿಕ ಕಾಲಘಟ್ಟದಲ್ಲಿ ತಮ್ಮ ಕವಿತೆಗಳಿಂದಲೇ ಗುರುತಿಸಲ್ಪಟ್ಟವರು ಬೆಳಗೆರೆ ಜಾನಕಮ್ಮ. ಆದ್ದರಿಂದ ಮಹಿಳಾ ಕಾವ್ಯ ಪರಂಪರೆಯಲ್ಲಿ ಆಯಾಯ ಕಾಲಘಟ್ಟಗಳಲ್ಲಿ ಗುರುತಿಸಿಕೊಂಡ ಕಂತಿ, ಅಕ್ಕ ಮಹಾದೇವಿ ಮತ್ತು ಸಂಚಿಯ ಹೊನ್ನಮ್ಮನ ತರುವಾಯ ಮಹಿಳಾ ಅಸ್ಮಿತೆಯ ದೃಷ್ಟಿಯಿಂದ ಆಧುನಿಕ ಕಾಲಘಟ್ಟದಲ್ಲಿ ಗುರುತಿಸಬಹುದಾದ ಪ್ರಾತಿನಿಧಿಕ ಕವಯತ್ರಿ ಬೆಳಗೆರೆ ಜಾನಕಮ್ಮ ಎನ್ನುವುದರಲ್ಲಿ ಸಂಶಯವಿಲ್ಲ. ನೇಮಿಚಂದ್ರರು ಬೆಳಗೆರೆ ಜಾನಕಮ್ಮನನ್ನು 'ನವೋದಯ ಯುಗದ ಮೊದಲ ಕವಯತ್ರಿ' ಎಂದು ಉಲ್ಲೇಖಿಸಿರುವುದು ಉಚಿತವಾಗಿದೆ. ಅರುವತ್ತು– ಎಪ್ಪತ್ತರ ದಶಕವನ್ನು ಪ್ರತಿನಿಧೀಕರಿಸಿದ ಈ ಕವಯತ್ರಿಯರು ವೈಚಾರಿಕವಾಗಿ ಪ್ರಬುದ್ಧರಾಗಿದ್ದರು. ಹೆಣ್ಣಿನ ಭಾವನೆಗಳು, ವಿಚಾರಗಳು ಅವಳದ್ದೇ ಆಗಿ ಹೊರಹೊಮ್ಮುವ ಆಧುನಿಕತೆಯ ಆರಂಭಿಕ ಘಟ್ಟವಾಗಿ ನಿಲ್ಲಬಲ್ಲ ಈ ದಶಕ ಮುಂದಿನ ಕವಯತ್ರಿಯರಿಗೆ ರೂಪುರೇಷೆಗಳನ್ನು ಹಾಕಿಕೊಟ್ಟಿದೆ. ಹೆಣ್ಣು ಆತ್ಮವಿಮರ್ಶೆ ಮಾಡಿಕೊಂಡು ಹೊಸತನವನ್ನು ಸೃಷ್ಟಿಸಲು ತಳಪಾಯವನ್ನಿತ್ತಿದ್ದಾರೆ ಇಲ್ಲಿನ ಕವಯತ್ರಿಯರು. ಒಂದರ್ಥದಲ್ಲಿ ಎಪ್ಪತ್ತರ ದಶಕದಲ್ಲಿ ಮಹಿಳಾ ಸಾಹಿತ್ಯದಲ್ಲಾದ ಕ್ರಾಂತಿಗೆ ಒಂದು ಕಡೆ ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಕಾರಣವಾದರೆ, ಇನ್ನೊಂದೆಡೆ ಸಮಾಜ ಹೆಣ್ಣಿನ ಬಗ್ಗೆ ತಳೆದಿರುವ ಅಸಮಾನತೆಯ ಧೋರಣೆ ನಿಮಿತ್ತವಾಗಿದೆ.

ಹೆಣ್ಣು ಯಾವಾಗ ಅಭಿವ್ಯಕ್ತಿಗೆ ತೊಡಗಿದಳೋ ಅಲ್ಲಿಂದ ಅಂದರೆ ಜನಪದ ಸಾಹಿತ್ಯದಿಂದ ಮೊದಲ್ಗೊಂಡು ವೇದ ಕಾಲ, ವಚನ ಸಾಹಿತ್ಯವನ್ನು ದಾಟಿ ಇಪ್ಪತ್ತನೇ ಶತಮಾನಕ್ಕಾಗುವಾಗ ಹೆಣ್ಣು ತನ್ನ ಅಸ್ಮಿತೆಯನ್ನು ಕಾವ್ಯ ಪ್ರಕಾರದಲ್ಲಿ ಸಮರ್ಥವಾಗಿ ಅಭಿವ್ಯಕ್ತಿಸ ತೊಡಗಿದ್ದನ್ನು ಮತ್ತು ಅದರಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾಗಿರುವುದನ್ನು ಈ ಕಾಲಘಟ್ಟದ ಅವರ ಕಾವ್ಯಗಳಿಂದ ತಿಳಿಯಲು ಸಾಧ್ಯವಾಗುವುದು.ಕವಯತ್ರಿ ಇಲ್ಲಿ ತನ್ನ ಮನದ ನೈಜ ಭಾವನೆಗಳಿಗೆ ಮೂರ್ತ ಸ್ವರೂಪವನ್ನು ಕೊಡಲು ಪ್ರಯತ್ನಿಸಿದ್ದಾಳೆ. ಮಹಿಳಾ ಅಭಿವ್ಯಕ್ತಿಯ ಈ ಮೊದಲ ಕೂಗು ಮುಂದೆ ಕನ್ನಡ ಸಾಹಿತ್ಯದ ನವ್ಯೋತ್ತರ ಕಾಲಘಟ್ಟದಲ್ಲಿ ಹೆಣ್ಣಿನ ಸುಪ್ತ ಭಾವನೆಗಳ ಮುಕ್ತ ಅಭಿವ್ಯಕ್ತಿಗೆ ಅಡಿಪಾಯವನ್ನೊದಗಿಸಿದೆ ಎಂದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು**

1. ಬಯಲುಸೀಮೆಯ ಹಾಡುಹಕ್ಕಿ ಬೆಳಗೆರೆ ಜಾನಕಮ್ಮ – ನೇಮಿಚಂದ್ರ
2. ಕರ್ನಾಟಕದ ಕವಯತ್ರಿಯರು – ಡಾ. ಸರೋಜಿನಿ ಮಹಿಷಿ
3. ಜಯದೇವಿ ತಾಯಿ ಲಿಗಾಡೆ – ರಾಮಕೃಷ್ಣ ಮರಾಠೆ